# ನಿರುಪಮಜ್ಞಾನಿ ನಿಜಗುಣರು

ಕುಮಾರ ನಿಜಗುಣ ಸ್ವಾಮಿಗಳು

( *ಹಿಂದಿನ ಸಂಚಿಕೆಯಿಂದ* )

**(ನಿಜಗುಣ ಶಿವಯೋಗಿಗಳ ಕೃತಿಗಳಲ್ಲಿ, 'ಪರಮಾನುಭವಬೋಧ' ಮತ್ತು 'ಅನುಭವಸಾರ' ಗ್ರಂಥಗಳ ಪರಿಚಯವನ್ನು ಹಿಂದಿನ ಸಂಚಿಕೆಯಲ್ಲಿ ಮಾಡಿ ಕೊಡಲಾಗಿದೆ.)**

## ೩. ಪರಮಾರ್ಥಗೀತೆ

ಪರಮಾರ್ಥಗೀತೆಯೆಂಬ ಇನ್ನೊಂದು ಗ್ರಂಥ ನಿದಿಧ್ಯಾಸನಕ್ಕೆ ಯೋಗ್ಯವಾದದ್ದು. ಇದು ಒಟ್ಟು ೩೨ ಕಂದಪದ್ಯಗಳಿಂದಲೂ ೧೧ ಗತಿಗಳಿಂದಲೂ ಕೂಡಿದ್ದು ಒಂದು ರೀತಿಯ ಮಂದಾನಿಲ ರಗಳೆ ಯಂತಹ ರಗಳೆಯ ಪ್ರಭೇದದಲ್ಲಿದೆ. ನಿಜಗುಣರೇ,

**ಕೇಳಲೆ ವಾಸಿಷ್ಠಾದಿಗಳಲ್ಲಿ**
**ಪೇಳಿದ ತತ್ವಾರ್ಥವನಿಂದಿಲ್ಲಿ**
**ನಿನಗರುಪುವೆ ನಾನೀ ಗೀತೆಯೊಳು**
**ತನುಜನೆ ಕೇಳೈ ತಿಳಿದೊಲವಿನೊಳು**

ಎಂದು ಹೇಳಿರುವಂತೆ ಇದು ಯೋಗವಾಸಿಷ್ಠವನ್ನು ಅವ ಲಂಬಿಸಿ ಬರೆದ ಗ್ರಂಥ. ಇದು ಗುರುಶಿಷ್ಯಸಂವಾದ ರೂಪದಲ್ಲಿದೆ. ಈ ಗ್ರಂಥದಲ್ಲಿಯೂ ಕೂಡ, ಸಾಧ್ಯ-ಸಾಧನೆಗಳೆರಡನ್ನೂ ಶಾಸ್ತ್ರ ಸಮ್ಮತವಿಡಿದು ಅನುಭವಪೂರ್ಣವಾಗಿ ನಿಜಗುಣರು ತಿಳಿಸಿ ಕೊಟ್ಟಿದ್ದಾರೆ.

## ೪. ಪಾರಮಾರ್ಥಪ್ರಕಾಶಿಕೆ

ಇನ್ನು ನಾಲ್ಕನೆಯ ಗ್ರಂಥ **ಪಾರಮಾರ್ಥಪ್ರಕಾಶಿಕೆ**. ಇದನ್ನು ಕನ್ನಡದ ಪ್ರಥಮ ಯೋಗಗ್ರಂಥವೆನ್ನಬಹುದು. ಇದು ಶ್ರೀ ಚೆನ್ನಸದಾಶಿವ ಯೋಗಿಯೆಂಬುವವರು ಕಾರಿಕಾರೂಪದಲ್ಲಿ ರಚಿಸಿರುವ **ಶಿವಯೋಗಪ್ರದೀಪಿಕಾ** ಎಂಬ ಸಂಸ್ಕೃತಗ್ರಂಥದ ಭಾವಾಂತರ. **ಅನಿಮಿತ್ತಬಂಧುತ್ವದಿಂ ನೆನೆದು ನೋಡಿ, ಸಂಸ್ಕೃತ ಶಬ್ದವ್ಯಾಕರಣ ಪ್ರಮಾಣಾದಿಗಳ ಲಕ್ಷಣಶಿಕ್ಷೆಗಳಿಲ್ಲದ, ಮೋಕ್ಷಮಾತ್ರಾಪೇಕ್ಷಿತ ರಾದ ಸಾಧುಜನಂಗಳು ಆಯಾಸವಿನಿತಿಲ್ಲದೋದಿ, ಕೇಳಿ, ತಿಳಿದು ಕೃತಾರ್ಥರಾಗಲೆಂದು 'ಶಿವಯೋಗ ಪ್ರದೀಪಿಕೆ'ಯೆಂಬ ವಿಶಿಷ್ಟ ಯೋಗಶಾಸ್ತ್ರದ ಗ್ರಂಥಗಳ ಅನ್ವಯ ತಾತ್ಪರ್ಯವನ್ನೇ..... ಸಕಲ ಯೋಗೀಶ್ವರರೊಡಂಬಡುವಂತೆ ಕರ್ನಾಟಕವಚನರಚನೆಗಳಿಂ 'ಪಾರಮಾರ್ಥಪ್ರಕಾಶಿಕೆ' ಎಂಬ ಪೆಸರಿಟ್ಟು ಬೇರೊಂದು ಪ್ರಕರಣ ಮಾಗಿ ಮಾಡಿದಂ** ಎಂದು ಅವರೇ ಹೇಳಿರುವಂತೆ ಇದೊಂದು ಭಾವಾಂತರಗ್ರಂಥ.

## ೫. ವಿವೇಕಚಿಂತಾಮಣಿ

ನಿಜಗುಣರ ಷಟ್ಶಾಸ್ತ್ರಗಳಲ್ಲಿ **ಪಾರಮಾರ್ಥಪ್ರಕಾಶಿಕೆ** ಹಾಗೂ **ವಿವೇಕಚಿಂತಾಮಣಿ**ಗಳು ಗದ್ಯಗ್ರಂಥಗಳು. ಈ ವಿವೇಕಚಿಂತಾ ಮಣಿಯು ಕನ್ನಡದ ಮೊತ್ತಮೊದಲ ವಿಶ್ವಕೋಶವೆಂದೇ ಪರಿಗಣಿಸ ಲ್ಪಟ್ಟಿದೆ. ಇದರಲ್ಲಿ ಹತ್ತು ಪರಿಚ್ಛೇದಗಳು ವರ್ಣಿತವಾಗಿದ್ದು ಅವು ಇಂತಿವೆ: ೧. ಕೈವಲ್ಯೋಪಾಯಕಥನ ೨. ಶಿವಸಿದ್ಧಾಂತತತ್ತ್ವಕಥನ ೩. ಬ್ರಹ್ಮಾಂಡಾಧೋವಿಸ್ತಾರಕಥನ ೪. ಜಂಬೂದ್ವೀಪಕಥನ ೫. ಸಪ್ತದ್ವೀಪವರ್ಣನ ೬. ದೇವಲೋಕಸ್ಥಿತಿವರ್ಣನ ೭. ಪೃಥಿವ್ಯಾದಿತತ್ತ್ವವರ್ಣನ ೮. ಶುದ್ಧಭುವನಸ್ಥಿತಿವರ್ಣನ ೯. ಭುವನಾಂತರಪ್ರಾಪ್ತಿಪ್ರಕಾರವರ್ಣನ ಹಾಗೂ ೧೦. ಕಾಲಕ್ರಮ ವರ್ಣನ. ಮೊದಲ ಕೈವಲ್ಯೋಪಾಯಕಥನದಲ್ಲಿ ವೇದಾಂತಕ್ಕೆ ಸಂಬಂಧಪಟ್ಟ ವಿಷಯಗಳೇ ತುಂಬಿವೆ. ಎರಡನೆಯ ಪ್ರಕರಣದಲ್ಲಿ ಸಿದ್ಧಾಂತಕ್ಕೆ ಸಂಬಂಧಪಟ್ಟ ವಿಷಯಗಳು ಅಡಕವಾಗಿವೆ. ವೇದಾಂತ ಸಿದ್ಧಾಂತಗಳನ್ನು ಸಮನ್ವಯಗೊಳಿಸಿದ ಮಹಾನುಭಾವರಾದ ನಿಜಗುಣರು ತಮ್ಮ ಎಲ್ಲಾ ಗ್ರಂಥಗಳನ್ನೂ 'ನಿಗಮಾಗಮ'ವೆಂದೇ ಸಾರುತ್ತಾರೆ. ಇದು ಅವರ ವಿಶಿಷ್ಟತೆ. ಇಲ್ಲಿಯ ದಶಪ್ರಕರಣಗಳನ್ನು ದಶಪರಿಚ್ಛೇದಗಳೆಂದೇ ಕರೆದಿದ್ದಾರೆ. ೪ನೆಯ ಪರಿಚ್ಛೇದದಲ್ಲಿ ಕಾವ್ಯಮೀಮಾಂಸೆ ಹಾಗೂ ಸಂಗೀತಶಾಸ್ತ್ರಗಳ ಬಗ್ಗೆ ವಿವರಣೆಯಿದೆ. ಬಹುಶಃ ಇದು ಕನ್ನಡದಲ್ಲಿ ಸಂಗೀತಶಾಸ್ತ್ರದ ಬಗ್ಗೆ ತಿಳಿಯಹೇಳುವ ಮೊದಲ ಗ್ರಂಥ. ಅಲ್ಲಿಯವರೆಗೆ ಸಂಗೀತಶಾಸ್ತ್ರ ಸಂಸ್ಕೃತದಲ್ಲಿಯೇ ಇತ್ತು. ಅವರ ಸಂಗೀತಶಾಸ್ತ್ರಜ್ಞಾನ ಇಲ್ಲಿ ಅರಳಿ ನಿಂತಿದೆ. ಇದಕ್ಕೆ ಅವರ ಕೈವಲ್ಯಪದ್ಧತಿಯ ೧೭೪ ಸಂಗೀತಕೃತಿಗಳೇ ಸಾಕ್ಷಿಯಾಗಿವೆ. ಇವುಗಳಲ್ಲಿ 'ನಾದನಾಮಕ್ರಿಯೆ' ಎಂಬ ರಾಗದಲ್ಲಿಯೇ ೪೮ ಕೃತಿ ಗಳಿವೆ. ಶಾಂತಿರಸಪ್ರಧಾನವಾದ ಈ ರಾಗ ಅವರಿಗೆ ಅಚ್ಚುಮೆಚ್ಚು.

## ೬. ಕೈವಲ್ಯ ಪದ್ಧತಿ

ಇದರ ಹೆಗ್ಗಳಿಕೆಯನ್ನು ಕುರಿತು ವಾರ್ಧಕಷಟ್ಪದಿಯೊಂದರಲ್ಲಿ ಕೆಳಕಂಡಂತೆ ಬಣ್ಣಿಸಲಾಗಿದೆ :

**ವಿರತಸಜ್ಜನವಿಹಾರೋದ್ಯಾನ ಯೋಗಿಗಳ**
**ವರಸಿದ್ಧಿಯಂಗಳ ಮುಮುಕ್ಷುಮೋಕ್ಷದ್ವಾರ**
**ಮೆರೆವ ಜಿಜ್ಞಾಸುಗಳ ಸುರಧೇನು ಪರತತ್ತ್ವಚಿಂತಕರ ಚಿಂತಾಮಣಿ**
**ಪರಮಹಂಸರ ಕೋಶ ಪರತರಾಧ್ಯಾತ್ಮಿಗಳ**
**ಕರಮುಕುರ ಸಾಧಕರ ಸೋಪಾನ ಸರ್ವಜನ**
**ಸುರತರುವಿನಂತೆಸೆವ ಕೈವಲ್ಯಪದ್ಧತಿಯ ಹೆಗ್ಗಳವದೇಂ ಬಣ್ಣಿಪೆಂ ॥**

ಇದರಲ್ಲಿ ಶಾಸ್ತ್ರದ ಗಾಂಭೀರ್ಯ, ಸಂಗೀತದ ಮಾಧುರ್ಯ, ಸಾಹಿತ್ಯದ ಸೌಂದರ್ಯ ಮೂರೂ ಮುಪ್ಪುರಿಗೊಂಡಿವೆ. ಮೊದಲೈದು ಗ್ರಂಥಗಳು ತರ್ಕಪೂರಿತವಾಗಿ ಬುದ್ಧಿಗಮ್ಯವಾಗಿದ್ದರೆ, ಇದು

